ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,

ಮಧುಗಿರಿ

ಅಸಲು ದಾವಾ ಸಂಖ್ಯೆ: 511/2018.

| | | |
|---|---|---|
| ವಾದಿ | ವಿರುದ್ಧ | ಪ್ರತಿವಾದಿಗಳು |
| ಜೆ.ಯು.ಹರೀಶ್‌ಬಾಬು | | ಉಗ್ರಪ್ಪ ಮತ್ತು ಇತರರು. |

## 3ನೇ ಪ್ರತಿವಾದಿಯ ಮುಖ್ಯ ವಿಚಾರಣೆಯ ಸಾಕ್ಷ್ಯರೂಪದ ಹೇಳಿಕೆ ಪ್ರಮಾಣ ಪತ್ರದ ಮುಖೇನ

DW1

ಸಾಕ್ಷಿದಾರರ ಹೆಸರು: ಬಾಲಮ್ಮ,

ಗಂಡನ ಹೆಸರು : ಅಶ್ವತ್ಥಪ್ಪ

ವಯಸ್ಸು : 45 ವರ್ಷ

ವಾಸ : ಪುಲಮಾಚಿ ಗ್ರಾಮ, ಐ.ಡಿ.ಹಳ್ಳಿ ಹೋಬಳಿ,
ಮಧುಗಿರಿ ತಾಲ್ಲೂಕು.

ಈ ಮೇಲ್ಕಂಡ ಸಾಕ್ಷಿದಾರಳಾದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ.

ನಾನು ಈ ಕೇಸಿನಲ್ಲಿ 3ನೇ ಪ್ರತಿವಾದಿ ಇದ್ದೇನೆ. 1ನೇ ಪ್ರತಿವಾದಿ ನನ್ನ ಅಣ್ಣ, 2ನೇ ಪ್ರತಿವಾದಿ ನನ್ನ ತಂದೆಯಾಗಬೇಕು, ಈಗ ಜೀವಂತವಿಲ್ಲ. ನನ್ನ ತಂದೆಯ ಹೆಸರು ಈರಣ್ಣ, ದಾವಾ ಆಸ್ತಿಗಳು ಮೂಲತಃ ನನ್ನ ತಂದೆಗೆ ಸೇರಿದ್ದು, ನನ್ನ ತಂದೆ ಮತ್ತು ಅವರ ಸಹೋದರರು, ಈ ಹಿಂದೆ ವಿಭಾಗದ ಮೂಲಕ ಪಡೆದಂತಹ ಸ್ವತ್ತುಗಳಾಗಿರುತ್ತವೆ. ಈ ಕೇಸಿನ ವಾದಿಯ ತಾಯಿ ಈ ಹಿಂದೆ ಇದೇ ಘನ ನ್ಯಾಯಾಲಯದಲ್ಲಿ ಓ.ಎಸ್.ನಂಬರ್ 451/2012 ರಲ್ಲಿ ನನ್ನ ಮತ್ತು ನನ್ನ ತಂದೆ ಹಾಗೂ ನನ್ನ ಅಣ್ಣನ ವಿರುದ್ದ ಜೀವನಾಂಶ ಮತ್ತು ಕ್ರಿಯೇಷನ್ ಆಫ್ ಚಾರ್ಜ್ ಕೋರಿ ದಾವೆಯನ್ನು ಸಲ್ಲಿಸಿಕೊಂಡಿದ್ದು, ಸದರಿ ದಾವೆಯಲ್ಲಿ ಇದೇ ನ್ಯಾಯಾಲಯವು ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳೆಂದು ಹಾಗೂ ವಾದಿಯ ತಾಯಿ ನನ್ನ ಅಣ್ಣ ಮತ್ತು ನನ್ನ ತಂದೆಯನ್ನು ಅನಾಧಾರಣೆ ಮಾಡಿ ನಿರ್ಲಕ್ಷ ಮಾಡಿರುವ ಕಾರಣ ಯಾವುದೇ ರೀತಿಯ ಜೀವನಾಂಶಕ್ಕೆ

NOTARY
B.A. ANNAPURNADEVI
MADHUGIRI
REVENUE TALUK
TUMAKURU DIST
LAW-LCL/36/2023
EXP 05/10/2028
GOVT OF KARNATAKA

No. of Corrections :- Nil

ಅರ್ಹರಲ್ಲ ಎಂದು ತೀರ್ಮಾನಿಸಿ ಈ ಹಿಂದೆಯೇ ದಿನಾಂಕ:8-8-2018 ರಂದು ತೀರ್ಮಾನವಾಗಿದ್ದರೂ ಮತ್ತೊಮ್ಮೆ ವಾದಿಯು ಈ ದಾವೆಯನ್ನು ಸಲ್ಲಿಸಿಕೊಂಡಿರುವುದು ಕಾನೂನುಬಾಹಿರವಾಗಿರುತ್ತದೆ. ಅಲ್ಲದೇ ದಾವೆಯು ನಿರ್ಣಿತ ನ್ಯಾಯದ ಅಡಿಯಲ್ಲಿ ಬರುವುದರಿಂದ ವಾದಿಯು ಯಾವುದೇ ಪರಿಹಾರಕ್ಕೆ ಅರ್ಹರಿರುವುದಿಲ್ಲ. ಆದ್ದರಿಂದ ಘನ ನ್ಯಾಯಾಲಯವು ವಾದಿಯ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಘನ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

ಅಲ್ಲದೇ ನನ್ನ ತಂದೆಯವರು ಅವರ ಜೀವಿತ ಕಾಲದಲ್ಲಿ ದಾವಾ ಐಟಂ ನಂಬರ್ 1 ಸರ್ವೆನಂಬರ್ 45/6 ರನ್ನು ನೊಂದಾಯಿತ ದಾನಪತ್ರದ ಅಡಿಯಲ್ಲಿ ನನಗೆ ದಾನವಾಗಿ ಕೊಟ್ಟಿರುವುದರಿಂದ ಸದರಿ ದಾನವನ್ನು ನಾನು ಒಪ್ಪಿದ್ದು, ಸದರಿ ದಾನಪತ್ರದ ಅಡಿಯಲ್ಲಿ ಎಲ್ಲಾ ಕಂದಾಯ ದಾಖಲೆಗಳು ನನ್ನ ಹೆಸರಿಗೆ ನಮೂದಾಗಿದ್ದು, ನಾನು ಸದರಿ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವುದನ್ನು ಅಲ್ಲದೇ ಮೂಲದಾವಾ ಸಂಖ್ಯೆ:451/2012 ರಲ್ಲಿ ಸದರಿ ದಾವೆಯನ್ನು ಘನ ನ್ಯಾಯಾಲಯವು ಎತ್ತಿ ಹಿಡಿದಿದ್ದು, ಮತ್ತು ವಾದಿ ಮತ್ತು ಅವರ ತಾಯಿ ನಮ್ಮ ತವರೂರಾದ ಆರ್.ಗೊಲ್ಲರಹಟ್ಟಿಯಲ್ಲಿ ಎಂದಿಗೂ ಸಹ ವಾಸವಿಲ್ಲದೇ ಇರುವುದರಿಂದ ನನ್ನ ತಂದೆ ಮತ್ತು ನನ್ನ ಅಣ್ಣ ಅಂದರೆ ಈ ಕೇಸಿನ 1ನೇ ಪ್ರತಿವಾದಿಯೊಂದಿಗೆ ವಾದಿಯ ತಾಯಿ ಎಂದಿಗೂ ಸಹ ಸಂಸಾರ ಮಾಡದ ಕಾರಣ ಮತ್ತು ನನ್ನ ತಂದೆ ಈರಣ್ಣರವರನ್ನು ಎಂದಿಗೂ ಸಹ ವಾದಿಯ ತಾಯಿ ಪಾಲನೆ ಪೋಷಣೆ ಮಾಡದೇ ಪ್ರತಿವಾದಿ 1 ಮತ್ತು 2 ರವರೊಂದಿಗೆ ಜೊತೆಯಾಗಿ ಎಂದಿಗೂ ಸಹ ವಾಸವಿಲ್ಲದೆ ಅನಾಧಾರಣೆ ಮಾಡಿ ನಿರ್ಲಕ್ಷ ಮಾಡಿದ ಕಾರಣ ನನ್ನ ತಂದೆ ಮತ್ತು ನನ್ನ ಅಣ್ಣನನ್ನು ನಾನು ನಮ್ಮ ಊರಿನಲ್ಲಿ ಅಂದರೆ ಪುಲಮಾಚಿ ಗ್ರಾಮದಲ್ಲಿ ನಮ್ಮೊಂದಿಗೆ ಇಟ್ಟುಕೊಂಡು ಸಾಕಿ ಸಲುಹಿ ಆರೈಕೆ ಮಾಡಿ ಪೋಷಣೆ ಮಾಡಿರುತ್ತೇನೆ, ಸರಿಸುಮಾರು 15-20 ವರ್ಷಗಳ ಕಾಲ ನಮ್ಮ ತಂದೆ ಮತ್ತು ನಮ್ಮ ಅಣ್ಣನನ್ನು ನಾನು ಸಾಕಿರುವುದರಿಂದ ಅದರ ಪ್ರತಿಫಲಕ್ಕಾಗಿ ಮತ್ತು ಯಾವುದೇ ಪ್ರತಿಫಲ ಅಪೇಕ್ಷೆ ಇಲ್ಲದೆ ನನ್ನ ಹೆಸರಿಗೆ 13-02-2012 ರಂದು ನೊಂದಾಯಿತ ದಾನಪತ್ರವನ್ನು ಮಾಡಿಸಿಕೊಟ್ಟ ಕಾರಣ ಸದರಿ ದಾನಪತ್ರವು ಈ

NOTARY
B.A. ANNAPURNADEVI
MADHUGIRI
REVENUE TALUK
TUMAKURU DIST
LAW-LCL/96/2023
EXP 05/10/2028
GOVT OF KARNATAKA

No. of Corrections:- Nil

ನ್ಯಾಯಾಲಯದಲ್ಲಿ ನಾನು ಈಗಾಗಲೇ ರುಜುವಾತು ಪಡಿಸಿದ ಕಾರಣ ವಾದಿಯ ತಾಯಿ ಎಂದಿಗೂ ಸಹ ಅವರ ಗಂಡನ ಮನೆಯಲ್ಲಿ ಗಂಡನೊಂದಿಗೆ ವಾಸವಿಲ್ಲದ ಕಾರಣ ಈಗಾಗಲೇ ಇದೇ ನ್ಯಾಯಾಲಯದಲ್ಲಿ ಮೂಲದಾವ ಸಂಖ್ಯೆ:451/2012 ರಲ್ಲಿ ತೀರ್ಪು ಬಂದಿರುವ ಕಾರಣ ವಾದಿಯು ಈ ದಾವೆಯನ್ನು ಸಲ್ಲಿಸಿಕೊಳ್ಳಲು ಯಾವುದೇ ವ್ಯಾಜ್ಯಕಾರಣವಿಲ್ಲದ ಕಾರಣ ಹಾಗೂ ಈಗಾಗಲೇ ನಿರ್ಣಿತ ನ್ಯಾಯ ಬಂದಿರುವುದರಿಂದ ಎಲ್ಲಾ ಅಂಶಗಳನ್ನು ಪರಿಗಣಿಸಿ ವಾದಿಯ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ನಾನು ಸಲ್ಲಿಸಿರುವ ದಾಖಲೆಗಳನ್ನು ನಿಶಾನೆಗಳಾಗಿ ಪರಿಗಣಿಸಿ ವಾದಿಯ ದಾವೆಯನ್ನು ಸದರಿ ದಾಖಲೆಗಳ ಆಧಾರದ ಮೇಲೆ ವಜಾ ಮಾಡಬೇಕಾಗಿ ಪ್ರಾರ್ಥನೆ.

ಈ ಮೇಲೆ ಹೇಳಿದ ಎಲ್ಲಾ ಅಂಶಗಳು ಸತ್ಯವಾಗಿದೆಯೆಂದು ಪ್ರಮಾಣೀಕರಿಸಿ ಈ ಕೆಳಕಂಡಂತೆ ಸಹಿ ಮಾಡಿರುತ್ತೇನೆ

ಗುರುತು ಬಲ್ಲವರು:

NOTARY
B.A. ANNAPURNADEVI
MADHUGIRI
REVENUE TALUK
TUMAKURU DIST
LAW-LCL/96/2023
EXP 05/10/2028
GOVT OF KARNATAKA

ವಕೀಲರು
ಮಧುಗಿರಿ
ದಿನಾಂಕ:15-06-2026

ಲಾ ಲ ಲ

ಪ್ರಮಾಣಕರ್ತರು

SWORN TO BFORE ME

B.A.ANNAPURNADEVI, B.A., LL.B
ADVOCATE & NOTARY
GOVT. OF KARNATAKA
Bus Stand Road,
MADHUGIRI - 572132
Tumkur Dist

15/6/2026

No. of Corrections :- Nil

ಓ.ಎಸ್.511/2018
ಡಿ.ಡಬ್ಲ್ಯೂ-1

ದಿನಾಂಕಃ **15.06.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ವಿ.ಆರ್.ಆರ್. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆಂದು ಎಂದು ಒಪ್ಪಿಸಹಿ ಮಾಡಿರುತ್ತೇನೆ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

15/6/26

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ